ಶ್ರೀ ವಸಂತ ವಿ. ಸಾಲಿಯಾನ.—ಈ ಯೋಜನೆಯನ್ನು ಅಲ್ಲಿಗೆ ತರುವಾಗ ಶಾಸಕರನ್ನು ಕೇಳಿದ್ದೀರಾ ? ಅಲ್ಲಿಯ ಗ್ರಾಮಸ್ಥರನ್ನು ಕೇಳಿದ್ದೀರಾ ?

ಅಧ್ಯಕ್ಷರು.—ಗಲಾಟೆ ಮಾಡಬೇಡಿ. ತಾವು ಮೂರು ಜನ ಶಾಸಕರು ಮಂತ್ರಿಗಳನ್ನು ಭೇಟಿಯಾಗಿ. ನಾನು ಅವರಿಗೆ ನಿಮ್ಮ ಜೊತೆಯಲ್ಲಿ ಚರ್ಚೆಮಾಡುವಂತೆ ಹೇಳಿದ್ದೇನೆ.

ಶ್ರೀ ವಸಂತ ವಿ. ಸಾಲಿಯಾನ.—ನೀವು ಜಿಲ್ಲೆಗೆ ಬಂದಿದ್ದಾಗ ಯಾವ ಶಾಸಕರನ್ನು ಕೇಳಿದ್ದೀರಿ ? ಈಗ ಏಕೆ ಆ ರೀತಿ ಹೇಳುತ್ತಿದ್ದೀರಿ ?

ಶ್ರೀ ಲಕ್ಷ್ಮೀನರಸಿಂಹಯ್ಯ.—ನಾನು ನಿಮ್ಮ ಜಿಲ್ಲೆಗೆ ಪ್ರವಾಸ ಬಂದಾಗ ನಮ್ಮ ಪ್ರವಾಸ ಕಾರ್ಯಕ್ರಮ ನಿಮಗೆಲ್ಲಾ ಬಂದಿರುತ್ತದೆ. ಅಲ್ಲಿಯ ಗ್ರಾಮಸ್ಥರು ಬಂದು ನನಗೆ ಮನವಿಯನ್ನು ಸಲ್ಲಿಸಿದ್ದಾರೆ ಅವರಿಗೆ ನಾನು ಸಾಕಷ್ಟು ಕನ್ವಿಯನ್ಸ್ ಮಾಡಿದ್ದೇನೆ. ಅವರು ಸ್ಯಾಟಿಸ್‌ಫೈ ಆಗಿ ಹೋಗಿದ್ದಾರೆ. ಎಲ್ಲಾ ಪತ್ರಿಕೆಗಳಲ್ಲೂ ಆ ಬಗ್ಗೆ ಸಂಪೂರ್ಣವಾದ ವರದಿ ಬಂದಿದೆ. ಅಲ್ಲಿ ಆ ಯೋಜನೆಯನ್ನು ಪ್ರಾರಂಭ ಮಾಡಿದ ಮೇಲೆ ಮೊದಲ ಹಂತದಲ್ಲೇ ಒಂದು ಸಾವಿರ ಜನರಿಗೆ ಕೆಲಸ ಸಿಕ್ಕುತ್ತದೆ. ಜೊತೆಗೆ ಸರ್ವೆ ಆದ ಮೇಲೆ ಎಷ್ಟು ಜನರಿಗೆ ತೊಂದರೆಯಾಗುತ್ತದೆ. ಎಷ್ಟು ಜನರ ಜಮೀನು ಹೋಗುತ್ತದೆ ಎಂಬುದು ಗೊತ್ತಾಗುತ್ತದೆ. ಆದರೆ ಅಲ್ಲಿ ಸರ್ವೆಯನ್ನೇ ಮಾಡುವುದಕ್ಕೆ ಬಿಡುತ್ತಿಲ್ಲ. ಮೊದಲು ಸರ್ವೆ ಆಗುವುದಕ್ಕೆ ಅನುವು ಮಾಡಿಕೊಡಬೇಕು. ದಕ್ಷಿಣ ಕನ್ನಡ ಜಿಲ್ಲೆಯ ಶಾಸಕರನ್ನು ನಿಗದಿಯಾದ ವೇಳೆಯಲ್ಲಿ ಭೇಟಿ ಮಾಡುವುದಕ್ಕೆ ನಾನು ತಯಾರಿದ್ದೇನೆ.

ಅಧ್ಯಕ್ಷರು.. -ನೀವು ಅವರು ಕೂಡಿ ಮಾತನಾಡಿ.

ನಿಯಮ ೩೩೪ರ ಮೇರೆಗೆ

೧) ವಿಶ್ವವಿದ್ಯಾನಿಲಯದ ಕಾಲೇಜುಗಳ ಶಿಕ್ಷಕರಿಂದ ಮುಷ್ಕರ

SRI M.S. KRISHNAN.—The University College Teachers are on strike all over the country since August 4, 1987. The teachers of the Universities in our State are also on strike since 4-8-87. Their main demand is the correction of some anomolies and weaknesses in the conditions, while implementing the new UGC scales. Teachers in our State are deprived of even UGC scale while in other States it has been enforced. Since the Government of India is taking an adamant attitude strike continues. Besides the teachers are courting arrest on 1st September 1987 and intensifying the agitation.

This strike has put both the teachers and students into great hardships. The State Government cannot be a passive spectator. It has to intervene, bring pressure on the Central Government and see that the just demands of the teachers are concerned, the attitude, approach and action of the Government of Karnataka are not known Hence a statement from the Education Minister is essential. I request him to do so.

(ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಎಂ. ರಘುಪತಿ.—ಸಂಬಂಧಪಟ್ಟ ಮಂತ್ರಿಗಳು ಮೇಲ್ಮನೆಯಲ್ಲಿದ್ದಾರೆ. ಅವರಿಂದ ಇವತ್ತು ಅಥವಾ ನಾಳೆ ಒಂದು ಸ್ಟೇಟ್‌ಮೆಂಟ್ ಮಾಡಿಸುತ್ತೇನೆ. ಈ ವಿಷಯ ಆ ಸದನದಲ್ಲಿ ಚರ್ಚೆಯಾಗಿದೆ. ನಾಳೆ ಅವರಿಂದ ಸ್ಟೇಟ್‌ಮೆಂಟ್ ಮಾಡಿಸುತ್ತೇನೆ.